

# ಜೋಧಪುರದ ಗಡಿಯಾರದ ಸುತ್ತ...

**ಭವ್ಯ ಕೋಟೆಗಳು, ಸ್ಮಾರಕಗಳ ನಡುವೆ ಹೊಸ ಜಗತ್ತು ನೋಡಬೇಕು ಎನ್ನುವವರಿಗೆ ಜೋಧಪುರದ 'ಕ್ಲಾಕ್ ಟವರ್' ಎಂದು ಕರೆಸಿಕೊಳ್ಳುವ 'ಘಂಟಾ ಘರ್' ಸೂಕ್ತ.**

**■ ಶ್ರೀನಿವಾಸ ಮೂರ್ತಿ ಎನ್.ಎಸ್.**

ರಾಜಸ್ಥಾನದ ಜೋಧಪುರ ಪ್ರವಾಸದಲ್ಲಿ, ಅಲ್ಲಿನ ಹಳೆಯ ಮಾರ್ಕೆಟ್ಟೊಂದರಲ್ಲಿ ನಮ್ಮ ಗಮನಸೆಳೆದಿದ್ದು ಗಡಿಯಾರ ಶೋಭಿತ ಎತ್ತರದ ಕಟ್ಟಡ. ನಮ್ಮನ್ನು ಕರೆದೊಯ್ದಿದ್ದ ಗಾಡಿ ಚಾಲಕನಿಗೆ ಜನಜಂಗುಳಿಯಲ್ಲಿ ಈ ಗಡಿಯಾರವನ್ನು ಹೊರಗಿನಿಂದಲೇ ತೋರಿಸಿ ಮುಂದೆ ಹೋಗುವ ಧಾವಂತ. ಆದರೆ ಅಲ್ಲಿನ ಇತಿಹಾಸದ ಪುಟ ಮತ್ತು ವೈವಿಧ್ಯವನ್ನು ನೋಡುವ ತವಕ ನಮಗೆ. ಇದರ ನಡುವೆ ನಮ್ಮ ಕೋರಿಕೆಯೇ ಗೆದ್ದಿತು. ಗಡಿಯಾರ ನೋಡುವ ನಮ್ಮ ಆಶಯಕ್ಕೆ ನಿರಾಸೆ ಮಾಡದೆ ನಮ್ಮನ್ನು ಇಲ್ಲಿಯೇ ಬಿಟ್ಟ.

ನಾವು ಮಾರ್ಕೆಟ್ ಹೊಕ್ಕೆವು. ಪ್ರವಾಸಿಗರು ಜೋಧಪುರದಲ್ಲಿ ತಮ್ಮ ಹಣದ ಮೌಲ್ಯಕ್ಕೆ ತಕ್ಕಂತೆ ವ್ಯಾಪಾರ ಮಾಡಲು ಅನುಕೂಲಕರ ಜಾಗ. ಚರ್ಮದ ವಸ್ತುಗಳಿಂದ ಹಿಡಿದು ರಾಜಸ್ಥಾನದ ಕರಕುಶಲ ವಸ್ತುಗಳು, ಮಸಾಲೆ ಪದಾರ್ಥಗಳು ಅಲ್ಲಿ ಲಭ್ಯ. ಅಲ್ಲಿ ಸಿಗುವ ಬಜ್ಜಿ ಪ್ರಸಿದ್ಧ. ಹಸಿರು ಮೆಣಸಿನಕಾಯಿಯನ್ನು ಮಸಾಲೆ, ಹಿಸುಕಿದ ಆಲೂಗೆಡ್ಡೆ ಹಾಕಿ ಕಡಲೆ ಹಿಟ್ಟಿನಲ್ಲಿ ಅದ್ದಿ ಕಂದು ಬಣ್ಣ ಬರುವವರೆಗೂ ಹುರಿದು ಟೊಮ್ಯಾಟೊ ಸಾಸ್, ಪುದಿನಾ ಮತ್ತು ಹುಣಸೆಹಣ್ಣಿನ ಚಟ್ನಿಯೊಂದಿಗೆ ಕೊಡಲಾಗುತ್ತದೆ. ನಮ್ಮಲ್ಲಿನ ಮೆಣಸಿನಕಾಯಿ ಬಜ್ಜಿ ಹೋಲುವ ಇದನ್ನು ಇಲ್ಲಿನ ಖಾರ ಮೆಣಸು ಮತ್ತು ಭಾವನಗರಿ ಮೆಣಸಿನಕಾಯಿಯಲ್ಲಿ ತಯಾರಿಸಲಾಗುತ್ತದೆ. ಇಲ್ಲಿನ ಮತ್ತೊಂದು ಪ್ರಸಿದ್ಧ ತಿಂಡಿ ಮಖಾನಿಯ ಲಸ್ಸಿಯ ರುಚಿ ನೋಡದಿದ್ದರೆ ಪ್ರವಾಸ ಅಪೂರ್ಣವಾದಂತೆ.

ಮಾರ್ಕೆಟ್ ಪ್ರವೇಶಿಸಿದ ನಂತರ ಆ ಚೌಕದಲ್ಲಿ ಎದ್ದುಕಾಣುವ ಗೋಪುರವೇ 'ಘಂಟಾ ಘರ್'. ಇದನ್ನು ಜೋಧಪುರದ ಕ್ಲಾಕ್ ಟವರ್ ಎಂದು ಕರೆಯುತ್ತಾರೆ. ಇದನ್ನು ಮಹಾರಾಜ ಸರ್ದಾರ್ ಸಿಂಗ್ ನಿರ್ಮಿಸಿದ್ದು, ಅವರ ಹೆಸರನ್ನೇ ಮಾರ್ಕೆಟ್‌ಗೂ ಇಡಲಾಗಿದೆ. ಹಿಂದಿನ ಕಾಲದಲ್ಲಿ ಸಮಯದ ಗುರುತಿಗಾಗಿ ಈ ಗೋಪುರವನ್ನು ನಿರ್ಮಾಣ ಮಾಡಲಾಗಿತ್ತು.

ಸುಮಾರು 95 ಅಡಿ ಎತ್ತರವಿರುವ ಈ ಕಟ್ಟಡ ನಿರ್ಮಾಣಗೊಂಡಿದ್ದು 1901ರಲ್ಲಿ. ಒಟ್ಟು ಐದು ಹಂತಗಳಲ್ಲಿ ಇದನ್ನು ಕಟ್ಟಲಾಗಿದೆ. ಇಲ್ಲಿನ ನೆಲಮಹಡಿಯಲ್ಲಿನ ಅಲಂಕೃತ ಕೆತ್ತನೆಗಳು ಮತ್ತು ಮೊದಲ ಹಂತದಲ್ಲಿನ ಕಲ್ಲಿನ ಬಾಲ್ಕನಿಗಳು ಕಲಾತ್ಮಕವಾಗಿವೆ. ನಾಲ್ಕನೇ ಹಂತದಲ್ಲಿ ಲಂಡನ್ ಐಕಾನಿಕ್ ಗೋಪುರವನ್ನು ನಿರ್ಮಿಸಿದ ಕಂಪನಿಯಿಂದ ಗಡಿಯಾರವನ್ನು ಖರೀದಿಸಿ ಇರಿಸಲಾಗಿದೆ. ಐದನೇ ಹಂತದಲ್ಲಿನ ಕಿರಿದಾದ ಕೋಣೆಯಲ್ಲಿ ಗಡಿಯಾರದ ಒಳಗಿನ ಯಂತ್ರಗಳಿವೆ. ಅಲ್ಲಿಯೇ ಇದ್ದ ನಿರ್ವಾಹಕ, ಗಡಿಯಾರದ ಕುರಿತು ಆಸಕ್ತಿಯಿಂದ ವಿವರಣೆ ನೀಡಿದರು.

ಪ್ರತಿ ಹಂತಕ್ಕೂ ಹೋಗುವ ಮೆಟ್ಟಿಲುಗಳು ನಿರ್ಮಾಣದ ಕುಶಲತೆಗೆ ಸಾಕ್ಷಿಯಂತಿವೆ. ಮೊದಲ ಹಂತದಲ್ಲಿನ ಬಾಲ್ಕನಿಯಿಂದ ಇಲ್ಲಿನ ಮೆಹರ್‌ನ್‌ಗಢ್ ಕೋಟೆಯ ಸಂಪೂರ್ಣ ದೃಶ್ಯವನ್ನು ನೋಡಬಹುದು. ಅಲ್ಲದೇ ನಾಲ್ಕೂ ದಿಕ್ಕಿನಲ್ಲೂ ಇಲ್ಲಿನ ಮಾರ್ಕೆಟ್ ಚಿತ್ರಣ ನೋಡುವುದೇ ಅದ್ಭುತ. ಜೋಧಪುರದ ಸಾಂಸ್ಕೃತಿಕ ಲೋಕವನ್ನೇ ತೆರೆದಿಟ್ಟಿತು ಈ ನೋಟ. ಜೋಧಪುರದ ಭವ್ಯ ಕೋಟೆಗಳು, ಸ್ಮಾರಕಗಳ ನಡುವೆ ಹೊಸ ಜಗತ್ತು ನೋಡಬೇಕು ಎನ್ನುವವರಿಗೆ ಇದು ಅತ್ಯಂತ ಸೂಕ್ತ ಸ್ಥಳ.

ಗಡಿಯಾರ ಹೊರಗಿನಿಂದ ಎಲ್ಲಾ ಸಮಯದಲ್ಲೂ ನೋಡಬಹುದಾದರೂ ಒಳಗಡೆ ಹೋಗಿ ನೋಡಲು ಬೆಳಿಗ್ಗೆ 10ರಿಂದ ಸಂಜೆ 6ರವರೆಗೆ ಲಭ್ಯ. ಯೂರೋಪಿಯನ್, ರಜಪೂತರ ವಾಸ್ತುಶೈಲಿಯ ಮಿಶ್ರಣದಲ್ಲಿ ಕಟ್ಟಲಾಗಿರುವ ಈ ಕಟ್ಟಡ ವಿನ್ಯಾಸಶೈಲಿ ಮನಸೂರೆಗೊಳಿಸುತ್ತದೆ.

ಪ್ರತಿಕ್ರಿಯಿಸಿ: feedback@sudha.co.in